50. ಗ್ರೂಪ್ ಡಿ	269	191	104	ವ್ಯಂದಡಿ	15 ವರ್ಷ
51. ಸ್ಯಾನಿಟರಿ ವರ್ಕರ್ಸ್	25	–	–	–	–
52. ಕಾರ್ಪೆಂಟರ್	1	1	0	–	8–10 ವರ್ಷ
53. ಶೂ ಮೇಕರ್	1	0	1	–	8–10 ವರ್ಷ
54. ಡಯಟ್ ಡಿಸ್ಟ್ರಿಬ್ಯೂಟರ್	1	0	1	–	8–10 ವರ್ಷ
ಒಟ್ಟು	**687**	**506**	**177**		

176(133) ಶ್ರೀ ಹೆಚ್.ಎಸ್.ಶಂಕರ ಲಿಂಗೇಗೌಡ (ಚಾಮರಾಜ)

ಮಾನ್ಯ ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರಿನ ವಿನಾಯಕ ನಗರದಲ್ಲಿರುವ (ಪಡುವಾರಹಳ್ಳಿ) ಪಶುವೈದ್ಯ ಆಸ್ಪತ್ರೆಯನ್ನು ಪ್ರಾರಂಬಿಸಿದ್ದು ಯಾವಾಗ?

ಆ) ಈ ಆಸ್ಪತ್ರೆ ಇರುವ ಜಾಗವು ಸ್ವಂತದ್ದೋ ಅಥವಾ ಬಾಡಿಗೆಯದ್ದೋ ತಿಳಿಸುವುದು.

ಇ) ಈ ಆಸ್ಪತ್ರೆಗೆ ಸ್ವಂತ ಜಾಗ ಹೊಂದಲು ಇಲಾಖೆಯು ಕೂಗೊಂಡ ಕ್ರಮವೇನು?

ಶ್ರೀ ರೇವೂನಾಯಕ ಬೆಳಮಗಿ

ಅ) ಮೈಸೂರಿನ ಪಡುವಾರಹಳ್ಳಿಯ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ದಿನಾಂಕ 20–07–1994 ರಲ್ಲಿ ಪ್ರಾರಂಭಿಸಲಾಗಿದೆ.

ಆ) ಈ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವು ಗ್ರಾಮಸ್ಥರಿಂದ ಮಠದ ದೇವಸ್ಥಾನದ ಆವರಣದ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಉಚಿತವಾಗಿ ನೀಡಿರುವ ಸ್ಥಳದಲ್ಲಿ ನಡೆಯುತ್ತಿದೆ.

ಇ) ಈಗಾಗಲೇ ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಆಪಸಂ/ಆಶಾ/ ಮವೈಸಂವೈ/2006-07 ದಿನಾಂಕ 02-02-2007 ರಲ್ಲಿ ಆಯುಕ್ತರು ಮೈಸೂರು ಮಹಾನ್ರ ಪಾಲಿಕೆ, ಇವರಿಗೆ ಪಶುಚಿಕಿತ್ಸಾಲಯ ಕಟ್ಟಡಕ್ಕಾಗಿ ನಾಗರೀಕ ಸೌಲಭ್ಯದಡಿ ನಿವೇಶನವನ್ನು ಉಚಿತವಾಗಿ ಇಲಾಖೆಗೆ ನೀಡಲು ಕೋರಲಾಗಿರುತ್ತದೆ. ಆದರೆ ಇದುವರೆವಿಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಲೀ ಅಥವಾ ಮೈಸೂರು ಮಹಾನಗರ ಪಾಲಿಕೆಯವರಾಗಲೀ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ/ ಜಾಗ ನೀಡಿದ ಕೂಡಲೇ ಸ್ವಂತ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು.

178(392) ಶ್ರೀ ಶಿವರಾಮು ಬಿ: (ಗಂಡಸಿ)

ವಿಷಯ: ಪರಿಶಿಷ್ಟ ಜಾತಿ/ವರ್ಗದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ಭರಿಸುವುದು.

ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ ಪ್ರವೇಶ ಪಡೆಯಲು ಪ್ರವೇಶ ಶುಲ್ಕವನ್ನು ಸರ್ಕಾರದ ತೀರ್ಮಾನದಂತೆ ಸಕಾರ ಭರಿಸುತ್ತದೆಯೇ?

ಆ) ಭರಿಸದಿದ್ದಲ್ಲಿ ಕಾರಣವೇನು?

ಇ) ಯಾವಾಗಿನಿಂದ ಭರಿಸಿರುವುದಿಲ್ಲ?

ಈ) ಕೇಂದ್ರ ಸಕಾರದ ಶಿಷ್ಯ ವೇತನ/ಪ್ರವೇಶ ಅನುದಾನ ರಾಜ್ಯ ಸಕಾರಕ್ಕೆ ಬಂದಿರುತ್ತದೆಯೇ ಬಂದಿದ್ದಲ್ಲಿ ಎಷ್ಟು?